ಬಿತ್ತನೆ ಬೀಜಗಳನ್ನು ನಿಗದಿಪಡಿಸಿದ ಮಾರಾಟ ದರದಂತೆ ರಾಜ್ಯದ ರೈತ ಸಂಪರ್ಕ ಕೇಂದ್ರಗಳು ಮತ್ತು ಹೆಚ್ಚುವರಿಯಾಗಿ ಗುರುತಿಸಿದ ಮಾರಾಟ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗುತ್ತಿದೆ.

4. ರಿಯಾಯಿತಿ ದರವು ಮೆಕ್ಕೆಜೋಳ ಮತ್ತು ಸೂರ್ಯಕಾಂತಿ ಹೊರತುಪಡಿಸಿ ಇತರೆ ಎಲ್ಲಾ ಬೆಳೆಗಳ ಮಾರಾಟ ದರದ ಶೇ.50ರಂತೆ, ಮೆಕ್ಕೆ ಜೋಳ ಬಿತ್ತನೆ ಬೀಜಕ್ಕೆ ಶೇ. 50 ಅಥವಾ ಪ್ರತಿ ಕೆ.ಜಿ.ಗೆ ಗರಿಷ್ಠ ರೂ. 55.00 ಯಾವುದು ಕಡಿಮೆಯೋ ಆ ರಿಯಾಯಿತಿ ದರ ಮತ್ತು ಸೂರ್ಯಕಾಂತಿ ಬಿತ್ತನೆ ಬೀಜಕ್ಕೆ ಶೇ.50 ಅಥವಾ ಪ್ರತಿ ಕೆ.ಜಿ.ಗೆ ಗರಿಷ್ಠ ರೂ. 120.00 ಯಾವುದು ಕಡಿಮೆಯೋ ಆ ರಿಯಾಯಿತಿ ದರವನ್ನು ನೀಡಲಾಗುವುದು.

5. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕಂದಾಯ ಇಲಾಖೆಯಿಂದ ಪಡೆದುಕೊಂಡಿರುವ ಕಾಲೋಚಿತವಾದ ಪಟ್ಟಿಯಲ್ಲಿರುವ ಅಧಿಕೃತ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜವನ್ನು ವಿತರಿಸಲಾಗುವುದು.

ಆ) ಇಲ್ಲ. ಬಿತ್ತನೆ ಬೀಜ ವಿತರಿಸುವಾಗ ಸಣ್ಣ ಮತ್ತು ಅತಿ ಸಣ್ಣ ರೈತರೆಂದು ವಿಭಜಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

707 ಶ್ರೀ ಬಂಡೆಪ್ಪ ಕಾಶ್ಯಂಪೂರ್: ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಹಿಂದಿನ ಸರ್ಕಾರ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ಸುಜಲ ಯೋಜನೆಯನ್ನು ಜಾರಿಗೆ ತಂದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಯೋಜನೆಯಡಿ ಸುಜಲ ಯೋಜನೆಯನ್ನು ಎಷ್ಟು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ; (ವಿವರ ನೀಡುವುದು)

ಇ) ಈ ಯೋಜನೆಯಡಿ ಜಿಲ್ಲಾವಾರು ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಈ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನ ಪಡೆಯಲಾಗುತ್ತಿದೆಯೇ;

ಉ) ಹಾಗಿದ್ದಲ್ಲಿ, ಕೇಂದ್ರ ಮತ್ತು ರಾಜ್ಯದಿಂದ ನೀಡುವ ಅನುದಾನದ ಮೊತ್ತ ಎಷ್ಟು;

ಊ) ಈ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳ–ಲಾಗುತ್ತಿದೆಯೇ?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು):

ಅ) ಹೌದು.

ಆ) ಸುಜಲಾ ಮಾದರಿಯಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಈ ಕೆಳಕಂಡ 6 ಜಿಲ್ಲೆಗಳಲ್ಲಿ ಪ್ರಧಾನ ಮಂತ್ರಿಗಳ ವಿಶೇಷ ನೆರವಿನ ಯೋಜನೆಗೆ ನಬಾರ್ಡ್ ಸಂಸ್ಥೆಯ ಆರ್.ಐ.ಡಿ.ಎಫ್. ನೆರವಿನಿಂದ ಕೈಗೊಳ್ಳಲಾಗಿದೆ.

1) ಬೆಳಗಾಂ	2) ಚಿತ್ರದುರ್ಗ
3) ಚಿಕ್ಕಮಗಳೂರು	4) ಹಾಸನ
5) ಶಿವಮೊಗ್ಗ	6) ಕೊಡಗು

ಇ) ಸುಜಲ–II ನಬಾರ್ಡ್ (RIDF) ಯೋಜನೆಯಡಿ ಜಿಲ್ಲಾವಾರು ಅನುದಾನದ ವಿವರ ಈ ಕೆಳಕಂಡಂತೆ ನಿಗದಿಪಡಿಸಿದೆ.

ಕ್ರ.ಸಂ.	ಜಿಲ್ಲೆ	(ರೂ.ಲಕ್ಷಗಳಲ್ಲಿ)
1	ಬೆಳಗಾಂ	3918.36
2	ಚಿತ್ರದುರ್ಗ	2626.44
3	ಚಿಕ್ಕಮಗಳೂರು	3066.68
4	ಹಾಸನ	3840.00
5	ಶಿವಮೊಗ್ಗ	3301.68
6	ಕೊಡಗು	1246.80
	ಒಟ್ಟು	**17999.86**

ಈ) ಇಲ್ಲ.

ಉ) ಈ ಯೋಜನೆಗೆ ನಬಾರ್ಡ್ ಸಂಸ್ಥೆಯಿಂದ RIDF ಯೋಜನೆಯಡಿ ಶೇ.80%ರ ಸಾಲದ ರೂಪದಲ್ಲಿ (14400.00 ರೂ.ಲಕ್ಷ) ಹಾಗೂ ರಾಜ್ಯ ಸರ್ಕಾರದಿಂದ ಶೇ.20% (3600.00 ರೂ. ಲಕ್ಷ) ಅನುದಾನ ರೂಪದಲ್ಲಿ ವೆಚ್ಚ ಭರಿಸಲಾಗುತ್ತದೆ.

ಊ) 5 ವರ್ಷ ಕಾರ್ಯಕ್ರಮವಾಗಿದ್ದು, 2008–09ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, 2012–13ನೇ ಅಂತ್ಯಕ್ಕೆ ಸಂಪೂರ್ಣವಾಗಿ ಅನುದಾನವನ್ನು ಬಳಸಿಕೊಳ್ಳಲಾಗುವುದು.

708 ಶ್ರೀ ಬಂಡೆಪ್ಪ ಕಾಶ್ಯಂಪೂರ್: ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜು ಪ್ರಾರಂಭವಾಗಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದೆ;